# ಕರ್ನಾಟಕ ಸರ್ಕಾರ

## ಜಿಲ್ಲಾಧಿಕಾರಿಗಳ ಕಾರ್ಯಾಲಯ, ಗದಗ– 582101

**ದೂರವಾಣಿ ಸಂಖ್ಯೆ: 08372– 236009,** **E mail- dco.gadag@gmail.com**


## –:: ಅಧಿಸೂಚನೆ ::–

**ಸಂಖ್ಯೆಃ ಸಿಬ್ಬಂದಿ(1)ವಹಿ–38/2016–17** **ದಿನಾಂಕ: 03 –11–2017**

ಗದಗ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್ ಸಿ ವೃಂದದ 46 ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇಮಕಾತಿ ಮಾಡುವ ಕುರಿತು ದಿನಾಂಕ: 13–03–2017 ರಂದು ಪ್ರಕಟಿಸಿದ ದಾಖಲಾತಿಗಳ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಿ ದಾಖಲಾತಿಗಳ ಪರಿಶೀಲನಾ ಕಾರ್ಯ ಮುಕ್ತಾಯವಾದ ನಂತರ ಅಂಗವಿಕಲ ಮೀಸಲಾತಿಯಡಿ ಆಯ್ಕೆಯಾದ ಸಾಮಾನ್ಯ ವರ್ಗದ–03 ಅಭ್ಯರ್ಥಿಗಳಲ್ಲಿ ಪರಿಶೀಲನೆ ಗೈರು ಹಾಜರಾದ ಕಾರಣ ಮತ್ತು ನಿಗಧಿಪಡಿಸಿದ ನಮೂನೆಯಲ್ಲಿ ವೈದ್ಯಕೀಯ ಪ್ರಮಾಣ ಪತ್ರ ಹಾಜರು ಪಡಿಸದೇ ಇದ್ದ ಕಾರಣ ಸದರಿ ಅಭ್ಯರ್ಥಿಗಳನ್ನು ತಿರಸ್ಕರಿಸಲಾಗಿರುತ್ತದೆ. ಮತ್ತು ಪ್ರವರ್ಗ–2ಎ–01 ಅಂಗವಿಕಲ ಮೀಸಲಾತಿಯಡಿ ದಾಖಲಾತಿಗಳ ಪರಿಶೀಲನಾ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಪರಿಶೀಲನೆಗೆ ಗೈರು ಹಾಜರಾದ ಕಾರಣ ಈ ಒಟ್ಟು 04 **ಹುದ್ದೆಗಳಿಗೆ ಅಭ್ಯರ್ಥಿಗಳು ಕೊರತೆಯಾದ** ಕಾರಣ ಸದರಿ ಹುದ್ದೆಗಳನ್ನು ಹೊರತುಪಡಿಸಿ **ಉಳಿದ 42 ಹುದ್ದೆಗಳನ್ನು** ಭರ್ತಿ ಮಾಡುವ ಕುರಿತು ಮೆರಿಟ್ ಹಾಗೂ ರೋಷ್ಟರ ಆಧಾರದ ಮೇಲೆ ದಿನಾಂಕ:09–06–2017 ರಂದು ಅಂತಿಮ ಆಯ್ಕೆ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಸದರ ಪಟ್ಟಿಯಲ್ಲಿ ಆಯ್ಕೆಯಾದ **ಸಾಮಾನ್ಯ ವರ್ಗದಲ್ಲಿನ ಇತರೆ–01 ಹುದ್ದೆ ಮತ್ತು ಮಹಿಳಾ ಅಭ್ಯರ್ಥಿ–02 ಹುದ್ದೆ ಹಾಗೂ ಗ್ರಾಮೀಣ ಅಭ್ಯರ್ಥಿಯ–02 ಹುದ್ದೆ , (ಒಟ್ಟು 05)** ಹಾಗೂ **ಪರಿಶಿಷ್ಟ ಜಾತಿಯಲ್ಲಿನ–01** ಮಹಿಳಾ ಅಭ್ಯರ್ಥಿ, ಹಾಗೂ **ಪ್ರವರ್ಗ 2ಎ** ದಲ್ಲಿನ 01 ಮಹಿಳಾ ಅಭ್ಯರ್ಥಿ ಮತ್ತು 01 ಗ್ರಾಮೀಣ ಅಭ್ಯರ್ಥಿ, ಮತ್ತು **ಪ್ರವರ್ಗ–3ಬಿ ಯಲ್ಲಿನ–01** ಗ್ರಾಮೀಣ ಅಭ್ಯರ್ಥಿ ಹುದ್ದೆಗೆ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಮೂಲ ದಾಖಲೆಗಳನ್ನು ಹಾಜರುಪಡಿಸದೇ ಇದ್ದ ಕಾರಣ ಸದರಿ ಹುದ್ದೆಗಳಿಗೆ ಅಭ್ಯರ್ಥಿಗಳು ಕೊರತೆಯಾದ ಕಾರಣ ನಂತರದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸುವ ಕುರಿತು ದಿನಾಂಕ:08–08–2017 ರಂದು ಭರ್ತಿಯಾಗದೇ ಉಳಿದ 04 ಅಂಗವಿಕಲ ಹುದ್ದೆಗಳು ಮತ್ತು ಇತರೆ ಹುದ್ದೆಗಳು ಸೇರಿ **ಒಟ್ಟು 27** ಅಭ್ಯರ್ಥಿಗಳ ಹೆಚ್ಚುವರಿ ದಾಖಲಾತಿಗಳ ಪರಿಶೀಲನಾ ಪಟ್ಟಿಯನ್ನು ಪ್ರಕಟಿಸಿ ದಾಖಲಾತಿಗಳ ಪರಿಶೀಲನಾ ಕಾರ್ಯ ಮುಕ್ತಾಯವಾದ ನಂತರ **ಭರ್ತಿಯಾಗದೇ ಉಳಿದ ಒಟ್ಟು 13 ಹುದ್ದೆಗಳನ್ನು** ಭರ್ತಿ ಮಾಡುವ ಕುರಿತು ಮೆರಿಟ್ ಹಾಗೂ ರೋಷ್ಟರ್ ಆಧಾರದ ಮೇಲೆ ಹೆಚ್ಚುವರಿ ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ: 13–09–2017 ರಂದು ಪ್ರಕಟಿಸಲಾಗಿತ್ತು.

ದಿನಾಂಕ: 13–09–2017 ರಂದು ಪ್ರಕಟಿಸಿದ ಹೆಚ್ಚುವರಿ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಸಾಮಾನ್ಯ ವರ್ಗದಲ್ಲಿನ **ಮಹಿಳಾ ಅಭ್ಯರ್ಥಿ** ಮೀಸಲಾತಿಯಡಿ ಆಯ್ಕೆಯಾದ 02 ಅಭ್ಯರ್ಥಿಗಳು ನೇಮಕಾತಿ ಆದೇಶವನ್ನು ಸ್ವೀಕರಿಸಿದ ನಂತರ ಹುದ್ದೆಗೆ ಹಾಜರಾಗಲು ಇಚ್ಛೆಇಲ್ಲದೇ ಇದ್ದ ಕಾರಣ ಸದರಿ ಹುದ್ದೆಗೆ ತಾವು ಹಾಜರಾಗಿರುವುದಿಲ್ಲ ಕಾರಣ ತಮ್ಮ ಮೂಲ ದಾಖಲೆಗಳನ್ನು ಮರಳಿ ನೀಡಿ ತನ್ನ ನಂತರದ ಅಭ್ಯರ್ಥಿಗಳನ್ನು ಆಯ್ಕೆ ಪರಿಗಣಿಸುವಂತೆ ವಿನಂತಿಸಿ ಅರ್ಜಿ ಸಲ್ಲಿಸಿ ಮೂಲ ದಾಖಲೆಗಳನ್ನು ಮರಳಿ ಪಡೆದುಕೊಂಡ ಕಾರಣ ಸಾಮಾನ್ಯ ವರ್ಗದಲ್ಲಿನ **ಮಹಿಳಾ ಅಭ್ಯರ್ಥಿ** ಮೀಸಲಾತಿಯ 02 ಹುದ್ದೆಗಳು ಭರ್ತಿಯಾಗದೇ ಉಳಿದಿರುತ್ತವೆ. ಕಾರಣ ಸದರ 02 ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಈಗಾಗಲೇ ದಾಖಲಾತಿಗಳ ಪರಿಶೀಲನೆಯಾದ ನಂತರದ ಅಭ್ಯರ್ಥಿಗಳನ್ನು ನೇಮಕಾತಿಗಾಗಿ ಪರಿಗಣಿಸುವ ಕುರಿತು ಈ ಅಧಿಸೂಚನೆಯೊಂದಿಗೆ ಹೆಚ್ಚುವರಿ ಆಯ್ಕೆ ಪಟ್ಟಿ–2 ನ್ನು ಪ್ರಕಟಿಸಲಾಗಿದೆ.

ಈ ಅಂತಿಮ ಆಯ್ಕೆ ಪಟ್ಟಿಯಲ್ಲಿ ಜಾತಿ ಮೀಸಲಾತಿಯಡಿ ಆಯ್ಕೆಯಾದ ಅಭ್ಯರ್ಥಿಗಳು ಮತ್ತು ಜಾತಿ ಮೀಸಲಾತಿಯಡಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರ ಬಗ್ಗೆ ಜಾತಿ ಆದಾಯ ಪರಿಶೀಲನಾ ಸಮಿತಿಯವರಿಂದ ಸ್ವೀಕೃತವಾಗುವ ಸಿಂಧುತ್ವ ಪ್ರಮಾಣ ಪತ್ರದ ನೈಜತೆ ಮತ್ತು ಪಿ.ಯು.ಸಿ/ಸಿ.ಬಿ.ಎಸ್.ಇ/ಐ.ಎಸ್.ಇ ಅಂಕಪಟ್ಟಿಗಳ ನೈಜತೆ ಹಾಗೂ ಅಂಗವಿಕಲ ಅಭ್ಯರ್ಥಿಗಳ ಅಂಕವಿಕಲತೆ ಬಗ್ಗೆ ಮೆಡಿಕಲ್ ಬೋರ್ಡ್‌ನಿಂದ ನೀಡಲಾಗುವ ಪ್ರಮಾಣ ಪತ್ರಗಳ ನೈಜತೆಯ ಪರಿಶೀಲನೆ ಷರತ್ತಿಗೊಳಪಟಿಸಿ ನೇಮಕಾತಿ ಆದೇಶ ನೀಡಲಾಗುವುದು.

**ಈ ಹೆಚ್ಚುವರಿ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ದಿನಾಂಕ** 17-11-2017 **ರಂದು ಬೆಳಿಗ್ಗೆ 11–00 ಗಂಟೆಯಿಂದ ಸಂಜೆ 5:30 ರೊಳಗಾಗಿ ಈ ಕೆಳಕಂಡ ಮೂಲ ದಾಖಲಾತಿಗಳನ್ನು ಖುದ್ದಾಗಿ ಹಾಜರಾಗಿ ಸಲ್ಲಿಸತಕ್ಕದ್ದು.** ಒಂದು ವೇಳೆ ನಿಗಧಿಪಡಿಸಿದ ದಿನಾಂಕದಂದು ಮೂಲ ದಾಖಲೆಗಳನ್ನು ಹಾಜರು ಪಡಿಸದೇ ಇದ್ದಲ್ಲಿ ತಮಗೆ ಆಸಕ್ತಿ ಇಲ್ಲವೆಂದು ಪರಿಗಣಿಸಿ ತಮ್ಮ ಹೆಸರನ್ನು ಆಯ್ಕೆ ಪಟ್ಟಿಯಿಂದ ಕೈಬಿಟ್ಟು ನಂತರದ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು. ಈ ಕುರಿತು ಯಾವುದೇ ತಂಟೆ ತಕರಾರುಗಳಿಗೆ ಆಸ್ಪದವಿರುವುದಿಲ್ಲ. ಹಾಗೂ ದಾಖಲೆಗಳನ್ನು ಸಲ್ಲಿಸಲು ಬರುವ ಅಭ್ಯರ್ಥಿಗಳಿಗೆ ಈ ಕಾರ್ಯಾಲಯದಿಂದ ಯಾವುದೇ ರೀತಿಯ ಭತ್ಯೆ ನೀಡಲಾಗುವುದಿಲ್ಲ.

1. ಎಸ್.ಎಸ್.ಎಲ್.ಸಿ, ಪಿ.ಯು.ಸಿ/ಸಿ.ಬಿ.ಎಸ್.ಇ/ಐ.ಎಸ್.ಇ ಮೂಲ ಅಂಕಪಟ್ಟಿಗಳು.
2. ಜಾತಿ ಹಾಗೂ ಆದಾಯ ಪ್ರಮಾಣ ಪತ್ರ (ಮೀಸಲಾತಿಯಡಿ ಆಯ್ಕೆಯಾದ ಅಭ್ಯರ್ಥಿಗಳು.)
3. ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ (ಗ್ರಾಮೀಣ ಮೀಸಲಾತಿಯಡಿ ಆಯ್ಕೆಯಾದ ಅಭ್ಯರ್ಥಿಗಳು.)
4. ಕನ್ನಡ ಮಾಧ್ಯಮ ಪ್ರಮಾಣ ಪತ್ರ (ಕನ್ನಡ ಮಾಧ್ಯಮ ಮೀಸಲಾತಿಯಡಿ ಆಯ್ಕೆಯಾದ ಅಭ್ಯರ್ಥಿಗಳು.)
5. ಅಂಗವಿಕಲ ಅಭ್ಯರ್ಥಿಗಳು ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ.
6. ಅರ್ಜಿ ಸಲ್ಲಿಸುವಾಗ ನಮೂದಿಸಲಾದ ಎಲ್ಲ ಮೂಲ ದಾಖಲಾತಿಗಳು.

**ಸೇವೆಗೆ ಹಾಜರಾಗುವಾಗ ಸಲ್ಲಿಸಬೇಕಾದ ದಾಖಲೆಗಳು**

7. ಆಸ್ತಿ ಮತ್ತು ಋಣ ಪಟ್ಟಿ.
8. ಅಭ್ಯರ್ಥಿಗಳ ನಡತೆಯ ಬಗ್ಗೆ ಇಬ್ಬರು ಗಣ್ಯ ವ್ಯಕ್ತಿಗಳಿಂದ ಅಥವಾ ಪತ್ರಾಂಕಿತ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
9. ಅಭ್ಯರ್ಥಿಯು ವಿವಾಹಿತನಾಗಿದ್ದರೆ/ವಿವಾಹಿತಳಾಗಿದ್ದರೆ ತನಗೆ ಒಬ್ಬರಿಗಿಂತ ಜೀವಂತ ಪತ್ನಿ/ಪತಿ ಯವರನ್ನು ಹೊಂದಿಲ್ಲವೆಂಬ ಸ್ವಯಂ ಘೋಷಣೆ ಪ್ರಮಾಣ ಪತ್ರ.

**ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಯು ಸುಳ್ಳು ಮಾಹಿತಿ / ದಾಖಲೆ ನೀಡಿ ಉದ್ಯೋಗಕ್ಕಾಗಿ ಪ್ರಯತ್ನಿಸಿರುವುದು ಕಂಡುಬಂದಲ್ಲಿ ಅವರ ವಿರುದ್ಧ ನಿಯಮಾನುಸಾರ ಕಾನೂನು ಕ್ರಮಕೈಗೊಳ್ಳಲಾಗುವುದು.**

**ಈ ಹೆಚ್ಚುವರಿ ಅಂತಿಮ ಆಯ್ಕೆಪಟ್ಟಿ–2 ರಲ್ಲಿನ ಅಭ್ಯರ್ಥಿಗಳಿಗೆ ಹುದ್ದೆಯ ಮೇಲಿನ ಯಾವುದೇ ಹಕ್ಕು ಪ್ರಧಾನ ಮಾಡಿಲ್ಲವೆಂದು ತಿಳಿಯುವುದು. (This Additional Final Selection List-2 Shall not Confirm any Right of Appointment)**

(ಮನೋಜ್ ಜೈನ್, ಭಾ.ಆ.ಸೇ)
**ಅಧ್ಯಕ್ಷರು**
**ಗ್ರಾಮಲೆಕ್ಕಿಗರ ನೇರನೇಮಕಾತಿ ಆಯ್ಕೆ ಪ್ರಾಧಿಕಾರ**
**ಮತ್ತು ಜಿಲ್ಲಾಧಿಕಾರಿಗಳು, ಗದಗ**

**ಪ್ರತಿ:** ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ ವೀಧಿ, ಬೆಂಗಳೂರು–01 ಇವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.

**ಪ್ರತಿ:** ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.

**ಪ್ರತಿ:** ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳಿಗೆ ಕಳುಹಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ

**ಪ್ರತಿ:** ಉಪ ವಿಭಾಗಾಧಿಕಾರಿಗಳು, ಗದಗ ಹಾಗೂ ಜಿಲ್ಲೆಯ ಎಲ್ಲ ತಹಶೀಲದಾರರಿಗೆ ಕಳುಹಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.

**ಪ್ರತಿ:** ಜಿಲ್ಲಾ ಸೂಚನಾ ಅಧಿಕಾರಿಗಳು, ಎನ್ಐಸಿ ಗದಗ ಇವರಿಗೆ ಕಳುಹಿಸುತ್ತಾ ಜಿಲ್ಲಾಧಿಕಾರಿಗಳ ವೆಬ್‌ಸೈಟ್ http://www.gadag.nic.in ನಲ್ಲಿ ಪ್ರಕಟಿಸಲು ಕೋರಿದೆ.

**GOVERNMENT OF KARNATAKA**
**Revenue Department**
**DEPUTY COMMISSIONER OFFICE GADAG DISTRICT GADAG**
**Village Accountant Recruitment 2016-17**
**Additional Final Selection List-2**

# GENERAL

| Slno | Set No. | Ref. No | Cand. Name | Father Name | Address | Marks | Percentage | DOB | Gender | Age Rel | Govt. Service | Category Claimed | Group. Claimed | Selected Category | Selected Under Group. | Roster Reservation |
|---|---|---|---|---|---|---|---|---|---|---|---|---|---|---|---|---|
| 1 | 1 | 122664 | APOORVA ARUN SHINDHE | ARUN | SHINDE CHAL NEAR RAYARAMATH MALAMADDI DHARWAD DHARWAR 580007 | 564/600 | 94.00 | 06/04/1996 | Female | | N | 3B | | GM | Women | W |
| 2 | 2 | 120977 | MADHULAXMI V WADAWADAGI | VENKATESH | NEAR SOMESHWAR TEMPLE CHINNUR GALLI GADAG GADAG 582101 | 564/600 | 94.00 | 17/07/1997 | Female | | Y | GM | - | GM | Women | W |

ಅಧ್ಯಕ್ಷರು
ಗ್ರಾಮಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ
ಮತ್ತು ಜಿಲ್ಲಾಧಿಕಾರಿ ಗದಗ